**ಕೋಣೆಯಿಂದ ಹೊರಹಾಕಿದ್ದಳೋ ಅದೇ ರೀತಿ ಈಗ ಅಪ್ಪನನ್ನೂ ಹೊರಹಾಕಿದ್ದಳು! ಅವಳಿಗೆ ಈಗ ಯಾರ ಮೇಲೆಯೂ ಪ್ರೀತಿಯಿಲ್ಲ, ಆ ಹೊಟ್ಟೆಕಿಚ್ಚಿನ ಸೋನ್ನ್ಯಾನನ್ನು ಬಿಟ್ಟು!**

**ಮೊದಲ ಬಾರಿಗೆ ನನಗೆ ಅಪ್ಪನ ಬಗ್ಗೆ ಪಾಪ ಅನಿಸಿತು. ಅವನ ಪರಿಸ್ಥಿತಿ ಇಷ್ಟು ಕೆಟ್ಟದಾಗಬಾರದಾಗಿತ್ತು! ನಾನಲ್ಲದೆ ಇನ್ನಾರು ಅವನಿಗೆ ಸಾಂತ್ವನ ಹೇಳಬೇಕು? ನನ್ನ ಅಷ್ಟು ಸಣ್ಣ ವಯಸ್ಸಿನಲ್ಲಿಯೂ ನಾನು ತುಂಬ ದೊಡ್ಡ ಮನಸ್ಸು ಮಾಡಿ ಅವನ ಹತ್ತಿರ ಸರಿದು ಅವನಿಗೆ ನೆಮ್ಮದಿಯ ಮುಲಾಮು ಸವರುವವನಂತೆ "ಪಪ್ಪ" ಎಂದೆ. ಅವ್ವ ಒಳಗೆ ಆ ಕೂಸಿಗೆ ಚೂ.. ಚೂ.. ಎನ್ನುತ್ತ ಸಮಾಧಾನಪಡಿಸುವಂತೆ ನಾನು ಕೂಡ ಅಪ್ಪನಿಗೆ "ಚೂ..ಚೂ.. ಏನೂ ಬೇಜಾರು ಮಾಡ್ಕೋಬ್ಯಾಡಪ್ಪ" ಎಂದೆ. ಮುಂದಿನ ಕೆಲದಿನಗಳಲ್ಲಿ ಅಪ್ಪ ನನಗೆ ಆಡಲೆಂದು ಚೆಂದವಾದ ರೈಲು ತಂದುಕೊಟ್ಟಾಗ ಅವನ ಮತ್ತು ನನ್ನ ಮುಖದಲ್ಲಿ ಮಿಂಚಿದ ಸಂತೋಷ ಇಡೀ ಮನೆಯನ್ನೆ ಬೆಳಗಿತು.**

## ಫ್ರ್ಯಾಂಕ್ ಓ'ಕಾನರ್

ಈ ಕಥೆಗಾರನನ್ನು ಐರ್ಲೆಂಡಿನ ಚೆಕಾಫ್ ಎಂದು ಕವಿ ಡಬ್ಲ್ಯೂ.ಬಿ. ಯೇಟ್ಸ್ ಕರೆದಿದ್ದಾನೆ. ತನ್ನ ಸೂಕ್ಷ್ಮ ಸಂವೇದನೆ ಹಾಗೂ ವ್ಯಂಗ್ಯದಿಂದ ರಷ್ಯಾವನ್ನು ಕಥೆಗಾರ ಚೆಕಾಫ್ ಹೇಗೆ ತೆರೆದಿಟ್ಟನೋ ಹಾಗೆ ಫ್ರ್ಯಾಂಕ್ ಓ'ಕಾನರ್ ಕೂಡ ಐರ್ಲೆಂಡಿನ ಒಳಹೊರಗನ್ನು ತುಂಬಿಕೊಡುತ್ತಾನೆ. ಐರಿಶ್ ಹಾಗೂ ಇಂಗ್ಲಿಷ್‌ರ ಕದನಗಳು ಮತ್ತು ಅಲ್ಲಿಯ ಜನ ಪಟ್ಟ ಪಾಡನ್ನು ಫ್ರ್ಯಾಂಕ್‌ನ ಕತೆ ಕಾದಂಬರಿಗಳಲ್ಲಿ ಕಾಣಬಹುದಾಗಿದೆ.

ಓ'ಕಾನರ್‌ನ ಮೊದಲ ಹೆಸರು ಮೈಕಲ್ ಫ್ರಾನ್ಸಿಸ್ ಓ'ಡೋನೋವನ್ ಎಂದಿತ್ತು. ಐರಿಷ್ ಲೇಖಕನಾದ ಓ'ಕಾನರ್ ಹುಟ್ಟಿದ್ದು 1903ರಲ್ಲಿ. ತನ್ನ 14ನೇ ವಯಸ್ಸಿನಲ್ಲಿ ಆತ ರೈಲ್ವೆಯಲ್ಲಿ ಕಾರಕೂನನಾಗಿದ್ದ. 15ನೇ ವಯಸ್ಸಿಗೆ ಐರಿಶ್ ಸೇನೆ ಸೇರಿದ್ದ. ಮುಂದೆ ಗ್ರಂಥಪಾಲಕನಾಗಿ, ಬರಹಗಾರನಾಗಿ ರೂಪುಗೊಂಡಿದ್ದು ಒಂದು ಕತೆ. ಅಮೆರಿಕದ ಅನೇಕ ವಿಶ್ವವಿದ್ಯಾಲಯಗಳಲ್ಲಿ ಸಂದರ್ಶಕ ಪ್ರಾಧ್ಯಾಪಕನಾಗುವಷ್ಟು ಎತ್ತರಕ್ಕೆ ಆತ ಬೆಳೆದ. 'ಗೆಸ್ಟ್ಸ್ ಆಫ್ ದಿ ನೇಷನ್', 'ಡೊಮೆಸ್ಟಿಕ್ ರಿಲೇಶನ್ಸ್', 'ಬೋನ್ಸ್ ಆಫ್ ಕಂಟೆನ್ಶನ್' ಮುಂತಾದ 10 ಕಥಾಸಂಕಲನಗಳು, ಎರಡು ಕಾದಂಬರಿಗಳು ಅವನನ್ನು ಒಬ್ಬ ವಿಶಿಷ್ಟ ಲೇಖಕನನ್ನಾಗಿ ಮಾಡಿವೆ. ತಾನು ಲೇಖಕನಾಗುವಲ್ಲಿ ತನ್ನ ತಾಯಿ ವಹಿಸಿದ ಪಾತ್ರವನ್ನು ತಾನೆಂದೂ ಮರೆಯಲಾರೆ ಎಂದು ಆತ ತನ್ನ ಆತ್ಮಕತೆಯಲ್ಲಿ ಹೇಳಿಕೊಂಡಿದ್ದಾನೆ. ಐರಿಶ್ ಸಾಹಿತ್ಯದ ಬೋಧಕನಾಗಿ, ನಾಟಕ ನಿರ್ದೇಶಕನಾಗಿ, ಪ್ರಸಿದ್ಧ ಅಬ್ಬೆ ಥೇಟರ್‌ನ ನಿರ್ದೇಶಕರಲ್ಲೊಬ್ಬನಾಗಿ, ಕತೆಗಾರ, ಕಾದಂಬರಿಕಾರ, ಅನುವಾದಕನಾಗಿ ಓ'ಕಾನರ್ ಕಾಲಾತೀತ ಪ್ರಭಾವವನ್ನು ಬಿಟ್ಟು ಹೋಗಿದ್ದಾನೆ.

## ಬಸು ಬೇವಿನಗಿಡದ

ಲೇಖಕರು ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಮುನವಳ್ಳಿಯವರು. 'ತಾಯವ್ವ', 'ಬಾಳೆಯ ಕಂಬ', 'ಹೊಡಿ ಚಕ್ಕಡಿ' ಹಾಗೂ 'ಉಗುಳುಬುಟ್ಟಿ' ಕಥಾಸಂಗ್ರಹಗಳು. 'ಸ್ವಾತಂತ್ರ್ಯ ಚಳವಳಿ ಹಾಗೂ ಭಾರತೀಯ ಮುಸ್ಲಿಮರು', 'ಸಮಕಾಲೀನ ಭಾರತೀಯ ಸಣ್ಣಕತೆಗಳು', 'ಕಮಲಾದೇವಿ ಚಟ್ಟೋಪಾಧ್ಯಾಯ', 'ಹಸಿರು ಕಾಡಿನ ಗೆಳೆಯರು', 'ಅಪರಾಜಿತೆ– ಸಾಮರಸೆಟ್ ಮಾಮ್ ಕತೆಗಳು' ಅವರ ಅನುವಾದ ಪುಸ್ತಕಗಳು. ಪ್ರಸ್ತುತ ಧಾರವಾಡ ಆಕಾಶವಾಣಿಯಲ್ಲಿ ಕಾರ್ಯಕ್ರಮ ಅಧಿಕಾರಿಯಾಗಿದ್ದಾರೆ.